ಎಲ್ಲವನ್ನೂ ಒಮ್ಮೆ ಗಮನಿಸಿದ ಮೇಲೆ, 'ದೇವಾಂಗ್ ಐಪ್ಯಾಡಿನಲ್ಲಿ ಮಿಸೆಸ್ ಸತ್ಪತಿಯವರ ಫೋಟೋಸ್ ಇವೆಯಲ್ಲವಾ? ಚೆಕ್ ಮಾಡಿದೀಯಾ?' ಎಂದು ನನ್ನ ಹುಡುಗನನ್ನು ಕೇಳಿದೆ.

'ಯೆಸ್, ಸರ್... ಮಿಸೆಸ್ ಸತ್ಪತಿ ಅಂತ ಹೊಸ ಫೋಲ್ಡರ್ ಇದೆ ನೋಡಿ...' ದೇವಾಂಗ ಹೇಳಿದ್ದೇ ಗುಡ್ ಗುಡ್... ಅಂತಂದು, 'ಸೀ ಯೂ ಗಯ್ಸ್...' ಎಂದು ಹೇಳಿ ಥಿಏಟರೊಳಗೆ ಅಡಿಯಿಕ್ಕಿ, ಮೆಲ್ಲಗೆ ಬಾಗಿಲು ಮುಚ್ಚಿಕೊಂಡೆ. ಆ ಹೊತ್ತಿನಲ್ಲಿ ಹಿಮಾದ್ರಿ ಸತ್ಪತಿ ಬಲು ದೈನ್ಯವಾಗಿ ತೋರಿಬಂದ.

## 8

ನಾನು ಥಿಏಟರೊಳಗಿನ ಬೆಳ್ಳಂಬೆಳ್ಳನೆ ಪರಿಸರದಲ್ಲಿ ಏಕಾಏಕಿ ಮಿಕ್ಕೆನಲ್ಲ... ಯಾಕೋ, ಚೂರೂ ಚೆನ್ನನಿಸಲಿಲ್ಲ.

ಎಲ್ಲವೂ ಬಿಳಿ. ಬಿಳಿಯೋ ಬಿಳಿ. ಬಿಳಿಯನ್ನೇ ತೊಳೆದು ಬಿಳಿಗೊಳಿಸಿದಷ್ಟು ಬಿಳಿ. ಗೋಡೆ ಸೂರು ಕಿಟಕಿ... ಮೇಜು ಕುರ್ಚಿ ಮಂಚ ಕಪಾಟು... ಹೀಗೆ ಎಲ್ಲವೂ ಬಿಳಿಯೇ. ಯಾವುದಕ್ಕೂ ಬಣ್ಣವಿಲ್ಲ. ಅಷ್ಟು ಸ್ವೈರ್ಯೆಲೆನಿಸುವ ಬಿಳಿ! ಸಾವೆಂಬ ಸಾವಿಗೂ ಈ ಪರಿ ಬಿಳಿರಂಗೇ ಅಂದುಕೊಂಡೆ!

ನಾನೂ ನನ್ನ ಬಟ್ಟೆ ಕಳಚಿ ಬಿಳಿಯುಡುಗೆ ತೊಟ್ಟು ಹೊರಬಂದು, ಶೃಂಗಾರಕ್ಕೆ ಅಣಿಗೊಂಡೆನಷ್ಟೆ... ಯಾರೋ ಕರೆದಂತನ್ನಿಸಿತು. ಹೆಣ್ಣು ಧ್ವನಿ.

ಯಾರೆಂದು ಅತ್ತಿತ್ತ ನೋಡಿದೆ. ಮತ್ತೆ ಕರೆದಂತಾಯಿತು. 'ಕೋ...' ಎಂದು ನನ್ನ ಹೆಸರನ್ನು ಮೊಟುಕುಗೈದು ಕರೆದ ಕೂಗು. ತೀರಾ 'ಕೋ' ಅಲ್ಲ, 'ಕೋವ್' ಸಹ ಅಲ್ಲ; ಎರಡರ ನಡುವೆನಿಸುವ ಉಲುಹು... ಯಾರಿರಬಹುದು? ಧ್ವನಿಯ ಪರಿಚಯವಿದೆ... ಆದರೆ ಯಾರದೆಂದು ಗೊತ್ತಾಗುತ್ತಿಲ್ಲವೇ?!

ಸಣ್ಣಗೆ ಬೆವರಿದೆ. ಸಂದುಗೊಂದುಗಳಲ್ಲೆಲ್ಲ ಕಂಪಿಸಿದೆ. ಏನೂ ತೋಚದಾದೆ. ಒತ್ತಾಯದಿಂದ ಧೃತಿ ಶೇಖರಿಸಿ, ಕಣ್ಣಗಲಿಸಿ ನೋಟದಲ್ಲಿ ನಿಚ್ಚಳ ತಾಳಿ ನೆಲ, ಗೋಡೆ, ಸೂರು, ಕಿಟಕಿ, ಪರದೆ... ಎಲ್ಲೆಲ್ಲೂ ನೋಡಿದೆ. ಯಾರೂ ಇರಲಿಲ್ಲ. ನನ್ನೊಳಗಿನ ಮಾತೇ ನನಗೆ ಕೇಳಿಸಿರಬೇಕೆಂದು ಅಂದುಕೊಂಡೆ... ಇನ್ನು ಕೆಲಸಕ್ಕೆ ತೊಡಗುವುದೆನ್ನುವಾಗ ಮತ್ತೊಮ್ಮೆ ಕರೆದಂತಾಯಿತು. ಯಾರೂ ಇಲ್ಲವೆಂದುಕೊಂಡೆನಲ್ಲ... ಈಕೆ ಇದ್ದಾಳಲ್ಲ? ಇಲ್ಲೇ ಮೇಜಿನಲ್ಲಿ ಮಲಗಿದ್ದಾಳಲ್ಲ? ಹೌದು... ಈ ಮಿಸೆಸ್ ಸತ್ಪತಿಯೇ ಏನಾದರೂ ಕರೆದು–ಗಿರೆದಳೆ?

ಕಂಗಾಲಾದೆ. ನನ್ನ ಯೋಚನೆಯೇ ವಿಲಕ್ಷಣವೆನ್ನಿಸಿ ಬೆರಗಾದೆ.

ವಿಚಿತ್ರವೆನ್ನಿಸಿತು!

ಮೆಲ್ಲಗೆ... ಮೇಜಿನಲ್ಲಿ ಮಲಗಿದಾಕೆಯ ಬಳಿಸಾರಿ... ಮೆಲ್ಲಗೆ ಮೆಲ್ಲ... ಮೆ... ಲ್ಲ... ಗೆ... ಹೊದಿಕೆ ಸರಿಸಿದೆ.

ಅಯ್ಯೋ ಆಶ್ಚರ್ಯವೇ ಮೊದಲಾಯಿತು! ಗಕ್ಕನೆ ಗುಂಡಿಗೆಯೇ ನಿಂತಂತನ್ನಿಸಿತು! ಧಸಕ್ಕನೆ ಪಾತಾಳಕ್ಕೆ ಜರೆದು ಸಂದೆನೋ ಹೇಗೆ? ಕುಸಿದುಹೋದೆ!!

ನನ್ನ ಮೊದಲ ಪ್ರೀತಿಯ ನೆನಪಾಯಿತು. ನಾಲ್ಕಾರು ವರ್ಷ ಒಡನಿದ್ದು ಬಿಟ್ಟೂಬಿಡದ ಹಾಗಿದ್ದ ನನ್ನ ಪ್ರಣಯದ ದೇವತೆ ಕಣ್ಣಿಗೆ ಕಟ್ಟಿಬಂದಳು. ಅವಳಿನ್ನೂ ಮನಸೊಳಗಿನ ಪುತ್ಥಳಿಯಷ್ಟೆ! ಮನಸಲ್ಲೇ ಇದ್ದಾಳಲ್ಲವೆ? ಹಾಗಾದರೆ ಇವಳು ಯಾರು? ಅವಳೇ ಇವಳೇ? ಕೋನಕೋನದಲ್ಲಿಯೂ ಹೌದನ್ನಿಸಿತು! ಅಯ್ಯೋ... ಸತ್ತು ಹೋದಳೆ?! ಕಣ್ಣುಗಳು ಧಾರಾಕಾರ ಹನಿದವು. 'ಹೂ' ಅಂತಂದೆ. ಹಲುಬಿದೆನೋ, ಹುಯಿಲಾದೆನೋ... ತಿಳಿಯದಾದೆ! ಗೊತ್ತಿರದೆಯೇ ಹೆಸರಿಟ್ಟು ಮತ್ತೆ ಮತ್ತೆ ಕರೆದೆ. ಓಗೊಡಲಿಲ್ಲ!

ದೇವರೇ ಏನಾಯಿತು ನಿನಗೆ? ಏನಾಯಿತು ಇವಳಿಗೆ?

ಮತ್ತೊಮ್ಮೆ 'ಹೂ' ಅಂತಂದೆ. ಈ ಸರ್ತಿ ಗೊತ್ತಿದ್ದೂ ಕರೆದೆ. ಊಹ್ಞೂಂ ಹೂ ಓಗೊಡಲಿಲ್ಲ!